8. ಘಟಕವು ಪುನಶ್ಚೇತನಗೊಂಡ ನಂತರ ಮುಂದೆ ಪಾವತಿಸಬೇಕಾದ ವಾಣಿಜ್ಯ ತೆರಿಗೆಯನ್ನು ಬಡ್ಡಿ ಇಲ್ಲದೇ ಮೂರು ವರ್ಷಗಳವರೆಗೆ ಮುಂದೂಡಲು ಅವಕಾಶ ಹಾಗೂ ಈ ಮೊತ್ತವನ್ನು ಮೂರು ವಾರ್ಷಿಕ ಕಂತುಗಳಲ್ಲಿ ಪ್ರಸ್ತುತ ತೆರಿಗೆಯೊಡನೆ ಪಾವತಿಸಲು ಬೇಕಾಗುತ್ತದೆ.

ಇ. ಟೆಕ್ಸಾಕ್ ಸಂಸ್ಥೆಯವರು 1998 ರಲ್ಲಿ ನಡೆಸಿದ ಸಣ್ಣ ಕೈಗಾರಿಕೆಗಳ ಮಾದರಿ ಸಮೀಕ್ಷಾ ವರದಿ ಪ್ರಕಾರ ರಾಜ್ಯದಲ್ಲಿ ಶೇ. 28.95 ರಷ್ಟು ಸಣ್ಣ ಕೈಗಾರಿಕೆಗಳು ಮುಚ್ಚಿರುವುದಾಗಿಯೂ ಹಾಗೂ ಬೆಳಗಾಂ ಜಿಲ್ಲೆಯಲ್ಲಿ ಶೇ. 28.70 ರಷ್ಟು ಸಣ್ಣ ಕೈಗಾರಿಕೆಗಳು ಮುಚ್ಚಿರುವುದಾಗಿ ವರದಿಯಾಗಿದೆ. ಆದಾಗ್ಯೂ, ಸದ್ಯ ಪ್ರಗತಿಯಲ್ಲಿರುವ ಸಣ್ಣ ಕೈಗಾರಿಕಾ ಘಟಕಗಳ ಗಣತಿ ಕಾರ್ಯವು ಮುಕ್ತಾಯಗೊಂಡ ನಂತರ ಸಂಪೂರ್ಣ ವಿವರಗಳು ದೊರೆಯುತ್ತದೆ.

ಈ. ಸಣ್ಣ ಕೈಗಾರಿಕೆಗಳು ಮುಚ್ಚಲು ಮುಖ್ಯ ಕಾರಣಗಳು ಕೆಳಕಂಡಂತೆ ಇವೆ;

1. ಬಂಡವಾಳ ಕೊರತೆ;
2. ವಿದ್ಯುತ್ ಕೊರತೆ;
3. ಮಾರುಕಟ್ಟೆ ಸಮಸ್ಯೆಗಳು;
4. ಬೃಹತ್ ಕೈಗಾರಿಕೆಗಳು ಹಾಗೂ ಇತರರಿಂದ ವಿಳಂಬ ಪಾವತಿ;
5. ಬಹುರಾಷ್ಟ್ರೀಯ ಕಂಪನಿಗಳಿಂದ ಪೈಪೋಟಿ.

ಬೆಳಗಾವಿ ಜಿಲ್ಲೆಯಲ್ಲಿ ನೇಕಾರರಿಗೆ ಮನೆ ಒದಗಿಸುವುದು

1808(2302): ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) : ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ವಕ್ಕುಂದ ಗ್ರಾಮದಲ್ಲಿ ನೇಕಾರರಿಗೆ ಮನೆ ಒದಗಿಸಲು ಕ್ರಮ ಕೈಗೊಳ್ಳಲಾಗುವುದೇ?

ಆ. ಅವರಿಗೆ ಕೆಲಸ ಮಾಡಲು ಅನುಕೂಲವಾಗುವಂತೆ ವರ್ಕ್‌ಶೆಡ್ ಕಟ್ಟಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಹೆಚ್.ಎಂ. ರೇವಣ್ಣ (ರೇಷ್ಮೆ ಮತ್ತು ಜವಳಿ ಸಚಿವರು)

ಅ. ವಕ್ಕುಂದ ಗ್ರಾಮದಲ್ಲಿ ನೇಕಾರರಿಂದ, ಮನೆ ಒದಗಿಸಲು ಕೋರಿ ಪ್ರಸ್ತಾವಗಳು ಬಂದಲ್ಲಿ ಪರಿಶೀಲಿಸಿ ಕೇಂದ್ರ ಪುರಸ್ಕೃತ ವಸತಿ ಕಾರ್ಯಾಗಾರ ಯೋಜನೆಯಲ್ಲಿ ಅವರಿಗೆ ಮನೆಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುವುದು. ಈವರೆಗೆ ಸದರಿ ಗ್ರಾಮದ ನೇಕಾರರಿಂದ ಮನೆ ಕೋರಿ ಯಾವುದೇ ಪ್ರಸ್ತಾವಗಳು ಬಂದಿರುವುದಿಲ್ಲ.

ಆ. ನೇಕಾರರ ಮನೆಗಳಿಗೆ ಹೊಂದಿಕೊಂಡಂತೆ ವರ್ಕ್ ಶೆಡ್ ಕಟ್ಟಲು ಕೇಂದ್ರ ಪುರಸ್ಕೃತ, ಯೋಜನೆಯಲ್ಲಿ ಅವಕಾಶವಿದ್ದು ಇದಕ್ಕೂ ಸಹ ನೇಕಾರರಿಂದ ಪ್ರಸ್ತಾವಗಳು ಬಂದಲ್ಲಿ ಪರಿಶೀಲಿಸಿ ವರ್ಕ್‌ಶೆಡ್‌ಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುವುದು.

ರೇಷ್ಮೆ ಕಾರ್ಖಾನೆ, ಮಾರುಕಟ್ಟೆ , ಬಿತ್ತನೆ ಕೋರಿ, ರೇಷ್ಮೆ ವಿನಿಮಯ ಕೇಂದ್ರದ ಅವ್ಯವಹಾರ

1809(2134): ಶ್ರೀ ಕೃಷ್ಣಮೂರ್ತಿ ಎ.ಆರ್. (ಸಂತೇಮರಳ್ಳಿ) : ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?